89 (137) ಶ್ರೀ ಪಾಟೀಲ್ ಡಿ.ಆರ್. (ಗದಗ್): ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ರಾಜ್ಯದಲ್ಲಿರುವ ಪ್ರಾಥಮಿಕ ಹಾಗೂ ಪ್ರೌಢ ಶಾಲೆಗಳಲ್ಲಿ ಮತ್ತು ಉನ್ನತ ಶಿಕ್ಷಣ ವಿದ್ಯಾಲಯಗಳಲ್ಲಿ ಓದುತ್ತಿರುವ, ಹಿಂದುಳಿದ, ಅಲ್ಪಸಂಖ್ಯಾತ ಹಾಗೂ ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡದ ವಿದ್ಯಾರ್ಥಿ ಹಾಗೂ ವಿದ್ಯಾರ್ಥಿನಿಯರೆಷ್ಟು; (ಜಿಲ್ಲಾವಾರು ವಿವರವಾದ ವಿವರ ಒದಗಿಸುವುದು) ;

ಆ) ಇವರ ಅನುಕೂಲಕ್ಕಾಗಿ ತೆಗೆದಿರುವ ವಸತಿ ನಿಲಯಗಳೆಷ್ಟು ;

ಇ) ಈ ಸೌಲಭ್ಯ ಪ್ರತಿಶತಃ ಎಷ್ಟು ವಿದ್ಯಾರ್ಥಿ / ವಿದ್ಯಾರ್ಥಿನಿಯರಿಗೆ ದೊರಕಿದೆ ;

ಈ) ಪ್ರತಿಶತಃ ಎಷ್ಟು ವಿದ್ಯಾರ್ಥಿಗಳಿಗೆ ಈ ಸೌಲಭ್ಯವನ್ನು ಸರ್ಕಾರ ಯೋಚಿಸಿದೆ ;

ಉ) ಈ ಯೋಜನೆಯನ್ನು ಕಾರ್ಯಗತಗೊಳಿಸಲು ಬೇಕಾಗುವ ಒಟ್ಟು ಸಂಪನ್ಮೂಲವೆಷ್ಟ ;

ಊ) ಸರ್ಕಾರ ಆಹಾರಕ್ಕಾಗಿ ಒದಗಿಸುವ ಅನುದಾನದ ಸದ್ವಿನಿಯೋಗವಾಗಲು ಕೈಗೊಳ್ಳುವ ಹೊಸ ಕ್ರಮಗಳೇನು ?

ಶ್ರೀ ಬಾಲಚಂದ್ರ ಲ. ಜಾರಕಿಹೊಳಿ (ಸಮಾಜ ಕಲ್ಯಾಣ ಸಚಿವರು):

ಅ) ಸಮಾಜ ಕಲ್ಯಾಣ ಇಲಾಖೆಯಲ್ಲಿ ಸಮಾಜ ಕಲ್ಯಾಣ ಇಲಾಖೆಯ ಪ್ರಾಥಮಿಕ ಶಾಲೆಗಳಲ್ಲಿ 8,13,041 ಬಾಲಕರು ಮತ್ತು 7,41,562 ಬಾಲಕಿಯರು ಪ್ರೌಢ ಶಾಲೆಗಳಲ್ಲಿ 2,04,218 ಬಾಲಕರು ಮತ್ತು 1,6,220 ಬಾಲಕಿಯರು ಹಾಗೂ ಉನ್ನತ ವ್ಯಾಸಂಗಗಳಲ್ಲಿ ಹಾಗೂ ವಿವಿಧ ಉನ್ನತ ವ್ಯಾಸಂಗಗಳಲ್ಲಿ 3,505 ಪರಿಶಿಷ್ಟ ಜಾತಿಯವರಿರುತ್ತಾರೆ.

ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆಯ ಪ್ರಾಥಮಿಕ ಶಾಲೆಗಳಲ್ಲಿ 2,60,089 ಬಾಲಕರು ಮತ್ತು 2,44,769 ಬಾಲಕಿಯರು, ಪ್ರೌಢಶಾಲೆಗಳಲ್ಲಿ 38,813 ಬಾಲಕರು ಮತ್ತು 31,773 ಬಾಲಕಿಯರು, ಹಾಗೂ ಕಾಲೇಜು ಶಿಕ್ಷಣದಲ್ಲಿ 31,475 ಬಾಲಕರು ಮತ್ತು 10,688 ಬಾಲಕಿಯರು ಓದುತ್ತಿರುತ್ತಾರೆ.

ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯಲ್ಲಿ 5 ರಿಂದ 10ನೇ ತರಗತಿಯವರೆಗೆ 20,03,435 ವಿದ್ಯಾರ್ಥಿಗಳು ಹಾಗೂ ಉನ್ನತ ಶಿಕ್ಷಣದಲ್ಲಿ 7,32,951 ವಿದ್ಯಾರ್ಥಿಗಳು ಓದುತ್ತಿರುತ್ತಾರೆ. ಹಿಂದುಳಿದಿರುವಿಕೆಯನ್ನು ಜಾತಿ ಮತ್ತು ಆದಾಯದ ಮೇಲೆ ನಿರ್ಧರಿಸಲಾಗುವುದರಿಂದ, ಹಿಂದುಳಿದ ವಿದ್ಯಾರ್ಥಿಗಳ ನಿಖರವಾದ ಜಿಲ್ಲಾವಾರು / ಕೋರ್ಸುವಾರು ಮಾಹಿತಿ ಲಭ್ಯವಿರುವುದಿಲ್ಲ. ಆದಾಗ್ಯೂ ಶಿಕ್ಷಣ ಇಲಾಖೆ ಹಾಗೂ ಆರ್ಥಿಕ ಮತ್ತು ಸಾಂಖ್ಯಿಕ ನಿರ್ದೇಶನಾಲಯವು ಹೊರ ತಂದಿರುವ ಕರ್ನಾಟಕ ಅಂಕಿ-ಅಂಶಗಳ (2005-06) ಮಾಹಿತಿಯಂತೆ ಸುಮಾರು 60%ರಷ್ಟು ಹಿಂದುಳಿದ ವರ್ಗದವರು ಇರುವುದಾಗಿ ಪರಿಗಣಿಸಬಹುದಾಗಿದೆ.

ಅಲ್ಪಸಂಖ್ಯಿತರ ಇಲಾಖೆಯಲ್ಲಿ ಈ ಮಾಹಿತಿಗಳು ಸಧ್ಯಕ್ಕೆ ದೊರೆಯುತ್ತಿಲ್ಲ. ಶಿಕ್ಷಣ ಇಲಾಖೆಗಳಿಂದ ಇದನ್ನು ಪಡೆದು ಕ್ರೊಢೀಕರಿಸಲಾಗುವುದು. (ಜಿಲ್ಲಾವಾರು ವಿವರಗಳನ್ನು ಅನುಬಂಧದಲ್ಲಿ ಲಗತ್ತಿಸಲಾಗಿದೆ.

ಸಮಾಜ ಕಲ್ಯಾಣ ಇಲಾಖೆಯಿಂದ 1199 ವಿದ್ಯಾರ್ಥಿನಿಲಯಗಳನ್ನು ಮತ್ತು 241 ಅನುದಾನಿತ ವಿದ್ಯಾರ್ಥಿನಿಲಯಗಳು ನಡೆಯುತ್ತಿದ್ದು 89.425 ವಿದ್ಯಾರ್ಥಿಗಳಿಗೆ ಊಟ ಮತ್ತು ವಸತಿ ಸೌಲಭ್ಯ ಕಲ್ಪಿಸಲಾಗಿದೆ.

ಪರಿಶಿಷ್ಟ ವರ್ಗದ ಇಲಾಖೆಯಿಂದ 102 ಬಾಲಕರ ವಿದ್ಯಾರ್ಥಿನಿಲಯಗಳನ್ನು ತೆರೆದು 5070 ವಿದ್ಯಾರ್ಥಿಗಳಿಗೆ ಮತ್ತು 45 ಬಾಲಕಿಯರ ವಿದ್ಯಾರ್ಥಿನಿಲಯಗಳನ್ನು ತೆರೆದು 2100 ಬಾಲಕಿಯರಿಗೆ ಊಟ ವಸತಿ ಸೌಲಭ್ಯ ಕಲ್ಪಿಸಲಾಗಿದೆ.

ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖಾ ವತಿಯಿಂದ 1207 ಮೆಟ್ರಿಕ್ ಪೂರ್ವ ವಿದ್ಯಾರ್ಥಿನಿಲಯಗಳನ್ನು ಮತ್ತು ಪಿ.ಯು.ಸಿ ಮೇಲ್ಪಟ್ಟ ವಿದ್ಯಾರ್ಥಿಗಳಿಗೆ 284 ಮೆಟ್ರಿಕ್ ನಂತರದ ವಿದ್ಯಾರ್ಥಿನಿಲಯಗಳನ್ನು ತೆರೆದು ಅವರುಗಳಿಗೆ ಊಟ ಮತ್ತು ವಸತಿ ಸೌಲಭ್ಯ ಕಲ್ಪಿಸಲಾಗಿದೆ.

ಅಲ್ಪಸಂಖ್ಯಾತರ ಕಲ್ಯಾಣ ಇಲಾಖಾ ವತಿಯಿಂದ ಮೆಟ್ರಿಕ್ ನಂತರದ 7 ಹಾಗೂ ಮೆಟ್ರಿಕ್ ಪೂರ್ವ 16 ವಿದ್ಯಾರ್ಥಿನಿಲಯಗಳನ್ನು ತೆರೆದು ಅವರುಗಳಿಗೆ ಊಟ ಮತ್ತು ವಸತಿ ಸೌಲಭ್ಯ ಕಲ್ಪಿಸಲಾಗಿದೆ.

ಇ. ಸಮಾಜ ಕಲ್ಯಾಣ ಇಲಾಖೆಯಲ್ಲಿ ಈ ಸೌಲಭ್ಯವನ್ನು ಪ್ರತಿಶತಃ 9.01 ವಿದ್ಯಾರ್ಥಿಗಳಿಗೆ ಒದಗಿಸಲಾಗಿದೆ.

ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆಯಲ್ಲಿ ಈ ಸೌಲಭ್ಯವನ್ನು ಪ್ರತಿಶತಃ 8.29 ವಿದ್ಯಾರ್ಥಿಗಳಿಗೆ ಒದಗಿಸಲಾಗಿದೆ.

ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯಲ್ಲಿ ಈ ಸೌಲಭ್ಯವನ್ನು ಪ್ರತಿಶತಃ 5.70 ವಿದ್ಯಾರ್ಥಿಗಳಿಗೆ ಒದಗಿಸಲಾಗಿದೆ.

ಅಲ್ಪಸಂಖ್ಯಾತ ಕಲ್ಯಾಣ ಇಲಾಖೆಯಲ್ಲಿ ಈ ಸೌಲಭ್ಯವನ್ನು ಶೇಕಡ 1ಕ್ಕಿಂತ ಕಡಿಮೆ ಇರುತ್ತದೆ.

ಈ) ಆಯವ್ಯಯದಲ್ಲಿ ಒದಗಿಸುವ ಅನುದಾನದ ಲಭ್ಯತೆ ಅನುಸರಿಸಿ ಈ ಸೌಲಭ್ಯವನ್ನು ಒದಗಿಸಲಾಗುತ್ತಿದೆ.

ಉ) ಮುಂದಿನ ವರ್ಷದ ಆಯವ್ಯಯದಲ್ಲಿ ಅನುಮೋದಿತವಾಗುವ ದರಗಳನ್ವಯ ಅನುದಾನ ಒದಗಿಸಲು ಕ್ರಮ ಕೈಗೊಳ್ಳಲಾಗುವುದು.

ಊ) ಆಹಾರಕ್ಕಾಗಿ ಒದಗಿಸಿದ ಅನುದಾನ ಸದ್ವಿನಿಯೋಗವಾಗಲು ಎಲ್ಲಾ ಅನುಷ್ಟಾನಾಧಿಕಾರಿಗಳಿಗೆ ಸ್ಪಷ್ಟ ಸೂಚನೆ ನೀಡಲಾಗಿದೆ. ಹಾಗೂ ರಾಜ್ಯ ಮಟ್ಟದ ಪ್ರತಿಯೊಂದು ಜಿಲ್ಲೆ ಒಬ್ಬ ಹಿರಿಯ ಅಧಿಕಾರಿಯನ್ನು ನೊಡಲ್ ಅಧಿಕಾರಿಯಾಗಿ ನೇಮಕ ಮಾಡಿ ಆಗಾಗ್ಗೆ ವಿದ್ಯಾರ್ಥಿನಿಲಯಗಳನ್ನು ಪರಿಶೀಲನೆ ಮಾಡಿ ಉತ್ತಮವಾಗಿ ನಿರ್ವಹಣೆ ಮಾಡುವಂತೆ ಕ್ರಮ ಕೈಗೊಳ್ಳಲಾಗಿದೆ.

ಅನುಬಂಧ

ಕ್ರ. ಸಂ.	ಜಿಲ್ಲೆಯ ಹೆಸರು	ಪ್ರಾಥಮಿಕ ಶಾಲೆ		ಪ್ರೌಢಶಾಲೆ	
		ಬಾಲಕ	ಬಾಲಕಿ	ಬಾಲಕ	ಬಾಲಕಿ
1.	ಬೆಂಗಳೂರು ನಗರ	81062	77800	25928	25997
2.	ಬೆಂಗಳೂರು (ಗ್ರಾ)	28244	27050	10190	9592
3.	ಚಿತ್ರದುರ್ಗ	31191	29343	9098	7413
4.	ದಾವಣಗೆರೆ	33720	31391	8472	6510
5.	ಕೋಲಾರ	53726	51913	15154	12484
6.	ತುಮಕೂರು	35646	33153	10853	9444
7.	ಶಿವಮೊಗ್ಗ	24474	22963	6673	5311
8.	ಮೈಸೂರು	34960	34366	12268	12025
9.	ಚಾಮರಾಜನಗರ	16529	15607	5974	5858
10.	ಮಂಡ್ಯ	16236	15895	6249	5939
11.	ಹಾಸನ	24468	23428	6974	6777
12.	ಚಿಕ್ಕಮಗಳೂರು	18121	16351	3829	3545
13.	ಕೊಡಗು	5249	5159	1909	1828
14.	ದಕ್ಷಿಣ ಕನ್ನಡ	11449	10437	3106	3021
15.	ಉಡುಪಿ	5367	5044	2009	1916
16.	ಬೆಳಗಾಂ	52466	42854	12744	8275
17.	ಬಿಜಾಪುರ	46665	39400	9945	5279
18.	ಬಾಗಲಕೋಟೆ	27833	25068	6246	3566
19.	ಧಾರವಾಡ	13424	12315	3844	3140
20.	ಗದಗ್	13842	12825	3373	1980
21.	ಹಾವೇರಿ	16702	15990	4177	2798
22.	ಉತ್ತರ ಕನ್ನಡ	9114	8846	2473	2205
23.	ಗುಲ್ಬರ್ಗಾ	76597	65564	10555	6271
24.	ರಾಯಚೂರು	37028	31098	4851	2744
25.	ಕೊಪ್ಪಳ	20114	17073	2882	1698
26.	ಬಳ್ಳಾರಿ	41958	38382	7518	5122
27.	ಬೀದರ್	37076	34257	6708	5472
	ಒಟ್ಟು	**813041**	**741562**	**204218**	**166220**

ರಾಜ್ಯದಲ್ಲಿ ಉನ್ನತ ಶಿಕ್ಷಣ ವಿದ್ಯಾಲಯಗಳಲ್ಲಿ ವ್ಯಾಸಂಗ ಮಾಡುತ್ತಿರುವ ಪರಿಶಿಷ್ಟ ಜಾತಿಯ ವಿದ್ಯಾರ್ಥಿಗಳ ವಿವರ ಇಂತಿದೆ.

ಕೋರ್ಸ್	ವಿದ್ಯಾರ್ಥಿಗಳ ಸಂಖ್ಯೆ
ವೈದ್ಯಕೀಯ	295
ದಂತ ವೈದ್ಯಕೀಯ	22
ಭಾರತೀಯ ವೈದ್ಯ ಪದ್ಧತಿಗಳು	128
ಇಂಜಿನಿಯರಿಂಗ್	3060
ಒಟ್ಟು	**3505**

ಅನುಬಂಧ–2

ರಾಜ್ಯದಲ್ಲಿರುವ ಪರಿಶಿಷ್ಟ ವರ್ಗ ಮತ್ತು ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯಲ್ಲಿ ಪ್ರಾಥಮಿಕ ಪ್ರೌಢ ಮತ್ತು ಉನ್ನತ ಶಿಕ್ಷಣ ವಿದ್ಯಾಲಯಗಳಲ್ಲಿ ಓದುತ್ತಿರುವ ಪರಿಶಿಷ್ಟ ಪಂಗಡ ಮತ್ತು ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳ ವಿವರ

ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆ

ಕ್ರ ಸಂ.	ಜಿಲ್ಲೆಯ ಹೆಸರು	ಪ್ರಾಥಮಿಕ ಶಾಲೆ (1 ರಿಂದ 7ನೇ ತರಗತಿ)		ಪ್ರೌಢಶಾಲೆ (8 ರಿಂದ 10ನೇ ತರಗತಿ)		ಒಟ್ಟು		ಮೆಟ್ರಿಕ್ ನಂತರದ ತರಗತಿಗಳು	
		ಬಾಲಕ	ಬಾಲಕಿ	ಬಾಲಕ	ಬಾಲಕಿ	ಬಾಲಕ	ಬಾಲಕಿ	ಬಾಲಕ	ಬಾಲಕಿ
1.	ಬೆಂಗಳೂರು (ನ)	3700	3606	724	717	4424	4323	1510	941
2.	ಬೆಂಗಳೂರು (ಗ್ರಾ)	4328	4224	985	908	5223	5132	434	303
3.	ಬಾಗಲಕೋಟೆ	6494	6202	791	653	7285	6855	836	169
4.	ಬೆಳಗಾಂ	23397	20629	2316	2119	25713	22748	2276	332
5.	ಬಳ್ಳಾರಿ	33091	29757	4572	2551	37663	32308	2976	526
6.	ಬೀದರ್	13606	14167	1829	1608	15435	15775	2976	310
7.	ಬಿಜಾಪುರ	2160	2572	252	371	2412	2898	818	58
8.	ಚಾಮರಾಜನಗರ	5861	5725	1051	887	6912	6612	210	156
9.	ಚಿಕ್ಕಮಗಳೂರು	2752	2552	447	426	3199	2978	397	152
10.	ಚಿತ್ರದುರ್ಗ	19633	18782	2159	1801	21792	20583	354	1589
11.	ದಾವಣಗೆರೆ	3444	3291	1072	971	4516	4262	3697	307
12.	ದಕ್ಷಿಣಕನ್ನಡ	14134	14248	2365	2171	16499	16419	305	904
13.	ಧಾರವಾಡ	5624	1736	650	492	6274	5228	3112	197
14.	ಗದಗ	4181	3966	476	549	4657	4515	395	467
15.	ಗುಲ್ಬರ್ಗಾ	11358	10067	1242	697	12600	10764	1818	231
16.	ಹಾಸನ	1789	1928	324	343	2113	2271	854	72
17.	ಹಾವೇರಿ	9948	9641	1304	1146	11252	10787	1401	265

18.	ಕೊಡಗು	3280	2972	346	348	3626	3320	97	81
19.	ಕೋಲಾರ	14085	13858	3493	3011	17578	16869	2082	504
20.	ಕೊಪ್ಪಳ	126621	11332	1764	1176	14385	12508	554	231
21.	ಮಂಡ್ಯ	1100	1005	267	269	1367	1274	217	58
22.	ಮೈಸೂರು	16710	17026	3899	3779	20609	20805	2371	742
23.	ರಾಯಚೂರು	25165	2515	3028	1339	28193	22854	1120	341
24.	ಶಿವಮೊಗ್ಗ	4553	3946	795	767	5348	4713	377	206
25.	ತುಮಕೂರು	11937	12159	1733	1761	13670	13920	2078	1247
26.	ಉಡುಪಿ	2628	2400	610	610	3238	3010	349	248
27.	ಉತ್ತರ ಕನ್ನಡ	2591	2508	319	303	2910	2811	152	537
	ಒಟ್ಟು	260080	244769	38813	31773	298893	276542	31475	10664

ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ

ಕ್ರ. ಸಂ.	ವಿವರ	ವ್ಯಾಸಂಗ ಮಾಡುತ್ತಿರುವ ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳ ಅಂದಾಜು ಸಂಖ್ಯೆ
1.	ಹಿರಿಯ ಪ್ರಾಥಮಿಕ ಮತ್ತು ಪ್ರೌಢ ಶಾಲೆಗಳಲ್ಲಿ (ತರಗತಿ 5 ರಿಂದ 10 ರವರೆಗೆ)	20,03,435
2.	ಉನ್ನತ ಶಿಕ್ಷಣ	7,32,951

90 (215) ಶ್ರೀ ಪಾಟೀಲ್ ಎಸ್.ಎಸ್. (ಮುಂಡರಗಿ): ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ರಾಜ್ಯದ ಯಾವ ಯಾವ ತಾಲ್ಲೂಕುಗಳಲ್ಲಿ ಏಡ್ಸ್ ಇದೆ ಮತ್ತು ಪ್ರತಿಶತ ಎಷ್ಟಿದೆ ;

ಆ) ಏಡ್ಸ್ ಬಾರದ ಹಾಗೆ ಮುಂಜಾಗ್ರತೆ ಕ್ರಮ ಕೈಗೊಳ್ಳಲಾಗಿದೆಯೇ ;

ಇ) ಏಡ್ಸ್ ಸೋಂಕಿತರಿಗೆ ಸರ್ಕಾರದ ಸಹಾಯವೇನು ?

ಶ್ರೀ ಆರ್. ಅಶೋಕ್ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು):

ಅ) ತಾಲ್ಲೂಕುವಾರು ಮಾಹಿತಿ ಲಭ್ಯವಿರುವುದಿಲ್ಲ.

ಜಿಲ್ಲಾವಾರು ಮಾಹಿತಿಯನ್ನು ಲಗತ್ತಿಸಲಾಗಿದೆ. (ಅನುಬಂಧ–1)

ಆ) ಏಡ್ಸ್ ಬಾರದ ಹಾಗೆ ಮುಂಜಾಗ್ರತೆ ಕ್ರಮ ಕೈಗೊಳ್ಳಲಾಗಿದೆ. ಈ ಬಗ್ಗೆ ಸಂಕ್ಷಿಪ್ತ ವರದಿಯನ್ನು ಲಗತ್ತಿಸಲಾಗಿದೆ. (ಅನುಬಂಧ–2).

ಇ) ಏಡ್ಸ್ ಸೋಂಕಿತರಿಗೆ ಸರ್ಕಾರವು ಈ ಕೆಳಕಂಡ ಕಾರ್ಯಕ್ರಮಗಳ ಮೂಲಕ ಸಹಾಯ ನೀಡುತ್ತಾ ಇದೆ;

ಅ) ಏಡ್ಸ್ ರೋಗದ ಬಗ್ಗೆ ತಿಳುವಳಿಕೆ ನೀಡುವ ವ್ಯಾಪಕ ಸಮಾಚಾರ, ಶಿಕ್ಷಣ ಮತ್ತು ಮಾಹಿತಿ ಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ.

ಆ) ಹನ್ನೆರಡು ಏ.ಆರ್.ಟಿ. ಕೇಂದ್ರಗಳನ್ನು ಸ್ಥಾಪಿಸಲಾಗಿದ್ದು, ಅವುಗಳಲ್ಲಿ ಏಡ್ಸ್ ರೋಗಿಗಳಿಗೆ ಅಂಟಿ ರಿಟ್ರೋವೈರಲ್ ಚಿಕಿತ್ಸೆ ಮತ್ತು ರಕ್ತದಲ್ಲಿನ ಸಿಡಿ4 ಕ್ಷಣಗಳ ಪರೀಕ್ಷಾ ಸೌಲಭ್ಯ ಒದಗಿಸಲಾಗುತ್ತಿದೆ.

ಇ) ಒಂಬತ್ತು ಆರೈಕೆ ಮತ್ತು ಬೆಂಬಲ ನೀಡುವ ಕೇಂದ್ರಗಳಲ್ಲಿ ಏಡ್ಸ್ ರೋಗಿಗಳಿಗೆ ಆರೈಕೆ ಮತ್ತು ನೈತಿಕ ಬೆಂಬಲ ನೀಡಲಾಗುತ್ತಿದೆ.

ಈ) ಸರ್ಕಾರಿ ಮತ್ತು ಸರ್ಕಾರೇತರ ಸಂಸ್ಥೆಗಳ ಮೂಲಕ ಸಾರ್ವಜನಿಕರಲ್ಲಿ ಏಡ್ಸ್ ರೋಗದ ಬಗ್ಗೆ ಮಾಹಿತಿ ತಿಳುವಳಿಕೆ, ತರಬೇತಿ ಮತ್ತು ಸಹಾಯ ನೀಡಲಾಗುತ್ತಿದೆ.